

ಆಷಾಢದಮ್ಮ

ಅಂದ್ರೇ ಆಷಾಢದಬ್ಬಕ್ಕೆ ಎಲ್ಲೆಲ್ಲೊ ಕೆಲ್ಸದ್ ಮ್ಯಾಲಿದ್ದ ಮಕ್ಕಳೂ ರಜೆ ತಗಂಡು ತಾಯಿ ಕಾಣಕ್ಕೆ ಬರ್ತಾರೆ (ಅಲ್ಲಿಯ ಬಾಡೂಟಕ್ಕೂ ಅಷ್ಟು ರುಚಿ, ದೇವ್ರ ಎಡೆಗೆ ಮಾಡಿದ್ದಲ್ವ ಅದ್ಕೇ) ಹಾಗೆ ನಾವು ಮೊದಲೆಂಗಿದ್ವು?... ಹೀಗೆಂಗಿದೀವಿ ನೋಡ್ಲಿ ಊರಿನ ಜನ, ಎಂಬ ಭಾವವೂ ಸೇರಿರುತ್ತೆ. ಒಂದು ಕಾರು, ಕಸ ಅಂತ ಇಲ್ದೇ ತಣ್ಣಗೆ ಮಲಗಿರುತ್ತಿದ್ದ ಊರು ಎಚ್ಚರಗೊಳ್ಳದು ಆಷಾಢದ ಅಮ್ಮನ ಹಬ್ಬದಲ್ಲಿ. ಇನ್ನೂ ವಿಶೇಷ ಅಂದ್ರೆ, ಅಲ್ಲೇನೂ ಜಾತ್ರೆ, ಗೀತ್ರೆ ಇಲ್ಲ. ಊರಿನ ಉದ್ದಕ್ಕೂ ವಿವಿಧ ಬಗೆಯ ಕಾರುಗಳು ಬಂದವರ ಅಂತಸ್ತನ್ನು ಪರಿಚಯಿಸಿ, ಹೆಣ್ಮಕ್ಕಳ ಸೀರೆ, ವಡವೆಗಳು ಎಲ್ಲವನ್ನು ಕಂಡಾಗ ಇಲ್ಲೆ ಪಿಂಯ್ಯ ಅಂತ ಇದ್ದವ್ರು. ಯಾಪಾಟಿ ಚಂದ ಆಗಿದ ನೋಡು ಅಂತ ಮೂಗಿನ ಮೇಲೆ ಬೆರಳಿಟ್ಕೋಬೇಕು.

ದೂರದ ಊರಿಗೆ ಮದ್ವೆ ಆಗಿ ಹೋದ ಹೆಣ್ಮಕ್ಕಳು ಆಷಾಢದಮ್ಮನ ದರ್ಶನಕ್ಕೆ ಬಂದೇ ಬರ್ತಾರೆ. ಗಂಡ ಮಕ್ಕಳು ಕರ್ಕಂಡು ಆರ್ತಿ ರೆಡಿ ಮಾಡಿಕಂಡು ಹೋಗದ್ನ ನೋಡೋಕೆ ಚಂದ. ಹೆಣ್ಮಕ್ಕಳು ಕರಸ್ಕಂಡ ಅಪ್ಪ ಅಮ್ಮನೂ ಬೀಗ್ತಾ ಇರ್ತಾರೆ. ‘ಸಣ್ಕೇ ಕಡ್ಡಿಯಂಗಿದ್ಲಲ್ಲೇ ನಿನ್ನ ಮಗ್ಳು ಗುರ್ತೇ ಸಿಂಗಂಗಿಲ್ಲ ಬುಡು, ಅಂತ ಚಂದ ಆಗವ್ಳೆ’ ಸಿಕ್ಕಿದ್ ಮಂದಿಯೆಲ್ಲ ಹೇಳ್ದಾಗ ತಾಯಿ ಹೃದಯ ತುಂಬಿಬರುತ್ತೆ. ಏನೋ ಬಿಡವ್ವ ಆ ತಾಯಿ ಕೃಪೆ ಚಂದಾಗ್ ಮಡಿಕ್ಕಂಡವ್ರೆ ಅವ್ಳ ಗಂಡನ ಮನೇವ್ರು ಹೀಗೆ ಸಂಭಾಷಣೆ ಕಲರವ.

ಇನ್ನು ಮನೆಮಠ ಸ್ವಚ್ಛ ಆದಮೇಲೆ ಅಕ್ಕಿ ತೊಳ್ದು ಒಣಗಿಸಿ ರೆಡಿ ಮಾಡಿಟ್ಕೋಬೇಕು. ಸೇರುಗಟ್ಟಲೇ ಬೇಕು, ಇಲ್ಲಿ ಎಡೆ ಮಾಡೋದು ನುಚ್ಚಕ್ಕಿ ಕಡುಬು. ಮನೆಯಲ್ಲಿ ಏನೇ ಅಡುಗೆ ಮಾಡಿದ್ರು ಆಷಾಢದಮ್ಮನ ಎಡೆಗೆ ಮಾಂಸದ ಸಾರು, ಉಂಡೆ ಕಡುಬು ಮಾತ್ರ. ಬೇಯಿಸಿದ ಮೊಟ್ಟೆಗಳಂತೂ ಉಲ್ಡಾಡಿ ಹೋಗ್ತವೆ ಬೇಯ್ಸಕ್ಕು ಲೆಕ್ಕ ಇಲ್ಲ, ಎಡೆಗಿಡಕ್ಕೂ ಲೆಕ್ಕ ಇಲ್ಲ. ಹೀಗೆ ಸಾಗ್ತದೆ ಅಷಾಢಮ್ಮನ ವೈಭವ. ಈ ಊರನ್ನು ಬಿಗ್ಗನಳ್ಳಿ, ಕೆಆರ್‌ಪೇಟೆ ಅಂತಲೂ ಹೇಳುತ್ತಾರೆ. ಮುಖ್ಯವಾಗಿ ನೇಕಾರರು, ಕುಂಬಾರರು, ಗೌಡರು, ಲಿಂಗಾಯಿತರನ್ನು ಬಿಟ್ರೆ ಬೇರೆಯವರದೆಲ್ಲಾ ಒಂದೆರಡು ಮನೆ ಇದ್ರೆ ಹೆಚ್ಚು. ಎಲ್ಲ ಸೇರಿದರೂ ಒಂದು ನೂರರಿಂದ ನೂರೈವತ್ತು ಮನೆ. ಅಷ್ಟೇ, ಇಡೀ ಊರಿಗೆ ಒಂದೇ ಉದ್ದದ ರಸ್ತೆ.

ಬಹಳಷ್ಟು ಕವಲೊಡೆದ ಬೀದಿಗಳಾಗಲಿ ಜನಾಂಗಗಳಾಗಲಿ ಇಲ್ಲಿಲ್ಲ. ಈ ಊರು ಚಿಕ್ಕಮಗಳೂರಿನಿಂದ ಹನ್ನೆರಡು ಕಿ.ಮೀ. ದೂರದಲ್ಲಿದೆ. ಮೊದಲೆಲ್ಲಾ ಚಿಕ್ಕಮಗಳೂರಿಗೆ ಓದಲು ಬರುತ್ತಿದ್ದ ವಿದ್ಯಾರ್ಥಿಗಳು ನಡೆದುಕೊಂಡೇ ಚಿಕ್ಕಮಗಳೂರಿಗೆ ಬರುತ್ತಿದ್ದರಂತೆ.

## ಮನದ ಭಾಷೆಯ ‘ಚೆನ್ನುಡಿ’

‘ನಾವಾಡುವ ನುಡಿಯೇ ಕನ್ನಡ ನುಡಿ’ ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ ‘ಚೆನ್ನುಡಿ’ ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.

ಹಾಂ... ಅಂದ ಹಾಗೆ ನಾನು ಹೇಳ ಹೊರಟಿರುವುದು ಆಷಾಢದಮ್ಮನ ಕಥೆ. ಆಷಾಢ ಮಾಸ ಬಂದಾಗ ಊರಿಗೆ ಊರು ಸಂಭ್ರಮಗೊಳ್ಳುತ್ತದೆ. ನೆಂಟರಿಷ್ಟರಿಗೆ ಕರೆಗಳು ಹೋಗುತ್ತವೆ. ಊರಲ್ಲಿ ಮನೆಮನೆಗಳು ಸ್ವಚ್ಛಗೊಳ್ಳುತ್ತವೆ. ಊರಲ್ಲಿ ನಮ್ಮ ವಿಶೇಷ ದೇವರಿಗೆಂದೇ ಮೀಸಲಾದ ಒಂದು ಜಾಗವಿದೆ. ನೇಮು ಫೇಮು ಎಂದು ಆಸೆ ಪಡದ ಆ ತಾಯಿ ಕೊಟ್ಟಿದ್ದನ್ನೇ ಆಕೆಗೆ ಕೊಡಬೇಕೆಂದು ಯಾರೋ ದಾನಿಗಳು ಕೊಟ್ಟ ಜಾಗ, ಅಂಗೂ ಹಿಂಗೂ ದಾನಿಗಳ ಹಣ ಕೂಡ್ಸಿ ಹಿರೀಕರು ಒಂದು ಸಣ್ಣ ಹೆಂಚಿನ ಮನೆ ಮಾಡಿದ್ದಾರೆ. ಅದೇ, ನಮ್ಮ ಆಷಾಢದಮ್ಮನ ನೆಲೆ.

ಇದು ಗುಡಿ ಅಂದ್ರೆ ಗುಡಿ ಅಲ್ಲ, ಮನೆ ಅಂದ್ರೆ ಮನೆ ಅಲ್ಲ, ಕೇವಲ ಒಂದು ಕೊಠಡಿ. ಹಬ್ಬ ಬಂದಾಗ ಊರಿನ ಯುವ ಪಡೆ ಉತ್ಸಾಹಗೊಂಡು, ಆಷಾಢದಮ್ಮನ ನೆಲೆಗೆ ಸುಣ್ಣ ಬಣ್ಣ ಕಾಣ್ಸಿ, ಸುತ್ತಮುತ್ತ ಅಚ್ಚುಕಟ್ಟು ಮಾಡ್ತಾರೆ. ಈ ಆಷಾಢಕ್ಕೆ ಯಾರ್ಯಾರ ಮನೆಯಲ್ಲಿ ಎಷ್ಟು ಕುರಿಗಳು ಹರಕೆ ಬಿಟ್ಟಿದ್ದಾರೆ ಎಂಬುದೇ ಮಾತಾಡುವವರ ದೊಡ್ಡಸ್ತಿಕೆಯಾಗುತ್ತದೆ. ಅದರೊಂದಿಗೆ ದೇವಿಯ ಕರುಣೆಯೂ ಚರ್ಚೆಯಾಗುತ್ತದೆ.

ಹೋದ ವರ್ಷ ಹಿಂಗೆ ಆಷಾಢದಮ್ಮನ ತವ ಬೇಡ್ಕೆ ಇಟ್ಟಿದ್ಲಂತೆ, ಅದನ್ನು ದೇವಿ ಒಂದೇ ತಿಂಗ್ಳಲ್ಲಿ ನೆಡೆಸಿಕೊಟ್ಟಿದ್ದಾಳೆ, ಅದ್ಕೆ ಅವರ ಮನೇಲಿ ಕುರಿ ಹರಕೆ. ಅಂತೂ ಒಂದೊಂದು ಕುರಿಗೊಂದೊಂದು ಕಥೆ. ಆಷಾಢದಮ್ಮಂಗೆ ನಡೆಯುವುದು ಕುರಿಕೋಳಿಗಳ ಎಡೆ ಕಣ್ರವ್ವ, ಈಕೆ ಉಂಡು ಸಂತೋಸ ಪಟ್ಕೊಂಡ್ರೆ ಊರಿಗೆ ಕೇಡು ಬರಲ್ಲ. ಮಕ್ಕಳೂ ಮರಿಗೆಲ್ಲಾ ಒಳ್ಳೆದಾಯ್ತದೆ ಎಂಬುದೇ ನಂಬಿಕೆ. ಇದು ಹಿರೇರ ಮಾತು.

ಈ ಆಷಾಢದಮ್ಮನ ಪೂಜಿಸುವವರು ವೈದಿಕ ಪುರೋಹಿತರಲ್ಲ. ಆ ಊರಿನಲ್ಲಿ ಹೆಚ್ಚಾಗಿ ನೆಲೆಸಿರುವ ದೇವಾಂಗ ಜನಾಂಗದವರು (ನೇಕಾರರು). ಯಾವ ಮಂತ್ರಘೋಷವಿಲ್ಲ, ಕಪ್ಪುರದಾರತಿ ಮಾಡಿ




ಪ್ರವಾಸಿಗರ ನೆಚ್ಚಿನ ಕಲ್ಲತ್ತಗಿರಿ ಫಾಲ್ಸ್